# ಮಕ್ಕಳ ಮೊಬೈಲ್ ಲೋಕದಲ್ಲಿ ಉನ್ಮಾದದ ಮಾತುಗಳು

# ಫೈರ್, ಕಿಲ್...

**ಆನ್‌ಲೈನ್ ಕ್ಲಾಸ್ ಕಾರಣದಿಂದಾಗಿ ಮಕ್ಕಳ ಕೈಗೆ ಸುಲಭವಾಗಿ ದೊರೆತಿರುವ ಮೊಬೈಲ್, ಪಾಠದೊಂದಿಗೆ ಉನ್ಮಾದಕಾರಿ ಆಟಗಳಿಗೂ ಅವಕಾಶ ಕಲ್ಪಿಸಿದೆ. ಎಷ್ಟೋ ಮಕ್ಕಳಿಗೆ ಪಾಠ ಒಂದು ಪಾಲು, ಆಟ ಮುಕ್ಕಾಲು ಎನ್ನುವಂತಾಗಿದೆ. ಈ ಆಟಗಳೋ ಮಕ್ಕಳ ಭಾವಲೋಕವನ್ನು ಕೆರಳಿಸುತ್ತ, ‘ಹೊಡಿ ಬಡಿ’ ಸಂಸ್ಕೃತಿಯನ್ನು ಉದ್ದೀಪಿಸುತ್ತಿರುವಂತೆ ಕಾಣಿಸುತ್ತದೆ. ಆಟ ಯಾವುದಿರಬೇಕು, ಆಡುವ ಸಮಯ ಎಷ್ಟಿರಬೇಕು ಎನ್ನುವುದರ ಬಗ್ಗೆ ಪೋಷಕರು ಎಚ್ಚರವಹಿಸಬೇಕಾಗಿದೆ.**

■ **ಸುದೇಶ ದೊಡ್ಡಪಾಳ್ಯ**



ಚಾರುಕೀರ್ತಿ ಒಂಬತ್ತನೇ ತರಗತಿ ವಿದ್ಯಾರ್ಥಿ. ಆತನಿಗೆ ಹಳ್ಳಿಯಲ್ಲಿರುವ ಅಜ್ಜಿ ಮನೆಗೆ ಹೋಗುವುದೆಂದರೆ ಸಂಭ್ರಮ. ಆರನೇ ತರಗತಿಯ ರಂಜನ್‌ಗೆ ಅಪ್ಪ, ಅಮ್ಮ, ತಂಗಿಯೊಂದಿಗೆ ನಗರವನ್ನು ಸುತ್ತುವುದೆಂದರೆ ಖುಷಿಯೋ ಖುಷಿ. ಹತ್ತನೇ ತರಗತಿಯ ಪ್ರಣವ್‌ಗೆ ಸ್ನೇಹಿತರೊಂದಿಗೆ ಕ್ರಿಕೆಟ್ ಆಡುವುದೆಂದರೆ ಬಿಸಿಲು, ಮಳೆ, ಗಾಳಿಯ ಪರಿವೆಯೇ ಇರುತ್ತಿರಲಿಲ್ಲ. ಆದರೆ, ಲಾಕ್‌ಡೌನ್ ನಂತರ ಇವರೆಲ್ಲರ ವರ್ತನೆಯಲ್ಲಿ ತುಂಬಾ ಬದಲಾವಣೆ ಆಗಿದೆ. ಚಾರುಕೀರ್ತಿಗೆ ಅಜ್ಜಿ ಮನೆ ಅಲರ್ಜಿ. ರಂಜನ್‌ಗೆ ನಗರ ಸುತ್ತುವುದು ಬೋರ್. ಪ್ರಣವ್‌ಗೆ ಕ್ರಿಕೆಟ್ ಅಂದ್ರೆ ಬೇಜಾರು! ಈ ಮೂವರ ಇಂತಹ ಬದಲಾದ ವರ್ತನೆಗೆ ಕಾರಣ, ಮೊಬೈಲ್.

ಹೌದು, ಮೊಬೈಲ್ ಕೈಗೆ ಸಿಕ್ಕ ನಂತರ ಇವರೆಲ್ಲರೂ ಮನೆ ಬಿಟ್ಟು ಹೊರಗೆ ಹೋಗಲು ಇಷ್ಟಪಡುತ್ತಿಲ್ಲ. ಅಂದಮೇಲೆ ಮೊಬೈಲ್ ಮಹಿಮೆ ಏನು ಎನ್ನುವುದು ಎಲ್ಲಾ ಪಾಲಕರಿಗೂ ಗೊತ್ತೇ ಇದೆ; ಅದು, ಮೊಬೈಲ್ ವಿಡಿಯೊ ಗೇಮ್ಸ್.

ಕೈಯಲ್ಲಿ ಮೊಬೈಲ್ ಇದ್ದರೆ ಸಾಕು, ಹೊರ ಜಗತ್ತಿನ ಪರಿವೆಯೇ ಇರುವುದಿಲ್ಲ. ಅಪ್ಪ, ಅಮ್ಮ ಎಷ್ಟು ಕರೆದರೂ ಕೇಳಿಸುವುದಿಲ್ಲ. ಮೊದಲೆಲ್ಲ ಸಮಯಕ್ಕೆ ಸರಿಯಾಗಿ ಹಸಿವಾಗುತ್ತಿತ್ತು. ಈಗ ಹಸಿವೇ ಆಗುತ್ತಿಲ್ಲ!

ಮೊಬೈಲ್ ಕೈಗೆ ಸಿಕ್ಕ ಮೇಲೆ ಶುರುವಾಗುತ್ತದೆ – ‘ಲೇ, ಅಲ್ಲಿ ಹೋಗ್ತಾ ಇದ್ದಾನೆ, ಹೊಡಿಯೋ. ಲೇ, ಆ ಗನ್ ತೆಗೆದುಕೋ. ಲೇ... ಲೇ... ಬೇಗ ಕಿಲ್ ಮಾಡು, ಇಲ್ಲ ಅಂದ್ರೆ ಅವನು ನಮ್ಮನ್ನು ಕಿಲ್ ಮಾಡಿಬಿಡುತ್ತಾನೆ’ – ಹೀಗೆ ಉದ್ವೇಗದಲ್ಲಿ ಮಾತನಾಡುತ್ತಲೇ ಫ್ರಿಫೈರ್ ಗೇಮ್‌ನಲ್ಲಿ ಮುಳುಗಿ ಹೋಗಿರುತ್ತಾರೆ.

ಒಮ್ಮೆ ನಮ್ಮ ಪಕ್ಕದ ಮನೆಯ ಅಜ್ಜಿ ಬಂದವರು, ‘ನಿನ್ನೆ ರಾತ್ರಿ, ನನ್ನ ಮೊಮ್ಮಗ ರೂಮ್ ಬಾಗಿಲು ಹಾಕಿಕೊಂಡು, ಲೋ, ಹೊಡಿಯೋ, ಕಿಲ್ ಮಾಡೋ ಅಂತ ಜೋರಾಗಿ ಕೂಗಾಡುತ್ತಿದ್ದ. ನನಗೆ ವಿಪರೀತ ಗಾಬರಿ ಆಯ್ತು. ಬಾಗಿಲು ತೆಗೆಸಿ ಕೇಳಿದರೆ, ಅದು ಗೇಮ್ ಅಜ್ಜಿ ಎಂದ. ನಾನು ನಿಟ್ಟುಸಿರುಬಿಟ್ಟೆ’ ಎಂದು ಹೇಳಿ ನಕ್ಕರು.

ಲಾಕ್‌ಡೌನ್ ಟೈಮ್‌ನಲ್ಲಿ ಮಕ್ಕಳು ಹೊರಗೆ ಹೋಗಿ ಆಟವಾಡಲು ಸಾಧ್ಯವಿರಲಿಲ್ಲ. ಮನೆಯಲ್ಲಿ ಕುಳಿತು ಬೋರು ಎನ್ನುವ ಮಾತು ಕೇಳಿ ಬೇಜಾರಾದ ಪೋಷಕರು ಮಕ್ಕಳ ಹಟಕ್ಕೆ ಮಣಿದು ಮೊಬೈಲ್ ಕೊಟ್ಟರು. ಅವರು ಮೊಬೈಲ್ ವಿಡಿಯೊ ಗೇಮ್‌ಗೆ ಮನಸ್ಸು ಕೊಟ್ಟರು. ಆಮೇಲೆ ಕೆಟ್ಟರು. ಗೇಮ್‌ನಲ್ಲಿ ಒಂದೊಂದೇ ಲೆವೆಲ್ ಮೇಲೆ ಹೋಗುತ್ತಾ ಹೋಗುತ್ತಾ ಗೇಮ್ ಚಟವಾಯಿತು. ಒಂದರೆಗಳಿಗೆ ಕೈಯಲ್ಲಿ ಮೊಬೈಲ್ ಇಲ್ಲ ಎಂದರೂ ತಳಮಳ.

ಅನ್‌ಲಾಕ್ ಆದ ಮೇಲೆ ಆನ್‌ಲೈನ್

## ಪೋಷಕರೇ, ಹೀಗೆ ಮಾಡಿ

- ಮೊಬೈಲ್‌ನಲ್ಲಿ ಹೆಚ್ಚು ಮಾತನಾಡಬೇಡಿ, ಟಿ.ವಿ. ಹೆಚ್ಚು ನೋಡಬೇಡಿ, ಅನಗತ್ಯವಾಗಿ ಲ್ಯಾಪ್‌ಟಾಪ್ ಬಳಸಬೇಡಿ.
- ಮಕ್ಕಳ ಕೈಗೆ ಮೊಬೈಲ್ ಸಿಗುವಂತೆ ಇಡಬೇಡಿ.
- ಹೊರಾಂಗಣ ಕ್ರೀಡೆಯನ್ನು ಪ್ರೋತ್ಸಾಹಿಸಿ.
- ಚಟುವಟಿಕೆಯಿಂದ ಕೂಡಿದ ಕಲಿಕೆಯನ್ನು ಉತ್ತೇಜಿಸಿ.
- ಬೈಕ್ ರೈಡ್ ಕರೆದುಕೊಂಡು ಹೋಗಿ.
- ಕೈತೋಟದಲ್ಲಿ ಗಿಡಗಳಿಗೆ ಪಾತಿ ಮಾಡುವುದು, ನೀರುಣಿಸುವುದು, ಕಳೆ ಕೀಳುವುದಕ್ಕೆ ತೊಡಗಿಸಿ.